

ನೀನು, ಇನ್ಶೂರೆನ್ಸ್ ಹಣ ತಂದುಕೊಡಲು ನೀನು, ಮಕ್ಕಳನ್ನು ಶಾಲೆಗೆ ಸೇರಿಸಲು ನೀನು, ಅವರ ಯೂನಿಫಾರ್ಮ್ ಹೊಲಿಸಲು ನೀನು, ಪುಸ್ತಕ–ಪೆನ್ನುಗಳಿಗೆ ನೀನು... ಮನೆಯ ಹಣ್ಣು–ತರಕಾರಿಗೆ ನೀನು. ಅಷ್ಟೆಲ್ಲ ಯಾಕೆ, ನನಗೆ ಸೀರೆ, ಅದಕ್ಕೊಪ್ಪುವ ರವಿಕೆಯ ಆಯ್ಕೆಗೆ ನೀನು... ಹಣದ ವಿಚಾರವೊಂದನ್ನು ಬಿಟ್ಟು, ನಿನ್ನ ಋಣವಿಲ್ಲದೆ ನನ್ನ ಜೀವನದ ತೃಣವೂ ಅಲುಗಾಡುತ್ತಿರಲಿಲ್ಲ. ಹೌದು, ಪುರ್ವಿತ್, ನನಗೆ ಈಗ ಯಾವ ಅನುಮಾನವೂ ಇಲ್ಲ – ನೀನಾಗಿಯೇ ನನ್ನನ್ನು ಬಿಟ್ಟು ಹೋಗಿದ್ದಲ್ಲ, ನಾನೇ ಹೋಗುವಂತೆ ಮಾಡಿದೆ... ಬಹುಶಃ ನನಗೆ ಅರಿವಿಲ್ಲದೆಯೇ, ನನ್ನ ಗಂಡನ ಜವಾಬ್ದಾರಿಗಳನ್ನೆಲ್ಲಾ ನಿನ್ನ ಬೆನ್ನಿಗೆ ಹೇರಿ ನಾನು ಹಗುರಾಗುತ್ತಿದ್ದೆ!

ನೀನಿಲ್ಲದೇ ಮತ್ತೂ ವರ್ಷಗಳು ಕಳೆದಿವೆ. ಬೆಂಗಳೂರಿನಲ್ಲಿ ಸಾಕಷ್ಟು ಮಳೆ ಸುರಿದಿದೆ; ಚಳಿ ಕೊರೆದಿದೆ; ಬಿಸಿಲು ಬೇಯಿಸಿದೆ... ದೊಡ್ಡ ಮಗಳು ಐಐಎಂ ಸೇರಿಕೊಂಡಿದ್ದಾಳೆ; ಎರಡನೆಯವಳು ಇನ್ನೇನು ಹೈಸ್ಕೂಲು ಸೇರಲಿದ್ದಾಳೆ. ನಾನು ಮೂರು ಕಂಪನಿಗಳನ್ನು ಬದಲಿಸಿ, ಈಗ ಒಂದರಲ್ಲಿ